**ಓ.ಎಸ್. ನಂಃ 320/2023**

**ಪಿ.ಡಬ್ಲ್ಯೂಃ 1**

**ದಿನಾಂಕ 13.09.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಎಲ್.ವಿ.ಆರ್ ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ವಂಶಾವಳಿ ಪ್ರಮಾಣ ಪತ್ರವನ್ನು ನಿಪಿ.1 ಎಂದು, ದಿಃ 26.10.1938 ರ ನೊಂದಾಯಿತ ಖರೀದಿ ಪತ್ರದ ಅಸಲು ಪ್ರತಿಯನ್ನು ನಿಪಿ.2 ಎಂದು, ದಿಃ 26.10.1938 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ಪ್ರತಿಯನ್ನು ನಿಪಿ.3 ಎಂದು, ಋಣಬಾರ ಪತ್ರಗಳನ್ನು ನಿಪಿ.4 ರಿಂದ 7 ಎಂದು, ಹಿಂಬರಹವನ್ನು ನಿಪಿ.8 ಎಂದು, ತಹಸೀಲ್ದಾರಗೆ ಸಲ್ಲಿಸಿದ ಅರ್ಜಿಯ ಸ್ವೀಕೃತಿಯನ್ನು ನಿಪಿ.9 ಎಂದು, ಪಹಣಿಯನ್ನು ನಿಪಿ.10 ಎಂದು, ಮರಣ ಪ್ರಮಾಣ ಪತ್ರಗಳನ್ನು ನಿಪಿ.11 ರಿಂದ 13 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಾಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**